## ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿ ಅರ್ಜಿ ಪರಿಶೀಲನೆಗೆ ಉಪನಿರ್ದೇಶಕರ ಕೈಪಿಡಿ

http://www.schooleducation.kar.nic.in/indexKn.html ವೆಬ್ ಸೈಟ್ ಗೆ ಭೇಟಿ ನೀಡಿ ಈ ವೆಬ್ ಸೈಟ್ ನ ಬಲ ಭಾಗದಲ್ಲಿ ಕಾಣಿಸುವ ಇಲಾಖಾ ತಂತ್ರಾಂಶಗಳ ಲಿಂಕ್ ಗಳ ಅಡಿಯಲ್ಲಿ ಬರುವ **"ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ"** ಎಂಬ ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿದಾಗ ಈ ಕೆಳಕಾಣಿಸಿರುವ ಪರದೆ ಕಂಡುಬರುತ್ತದೆ. ಸಂಬಂದಿಸಿದ ಜಿಲ್ಲೆಯ DDO/DDPI ಗಳು ಪರದೆಯ ಮೇಲೆ ಕಾಣಿಸುವ "DDO/DDPI" ಎಂಬ ರೇಡಿಯೋ ಬಟನ್ ಬಳಸಿ ತಮಗೆ ಈಗಾಗಲೇ ನೀಡಿರುವ ಲಾಗಿನ್ ಹೆಸರು ಹಾಗೂ ಪಾಸ್ವರ್ಡ್ ಬಳಸಿ ಲಾಗಿನ್ ಮಾಡಬಹುದಾಗಿದೆ.




HOME ಸ್ಕ್ರೀನ್ ನಲ್ಲಿ ಪ್ರೌಢಶಿಕ್ಷಕರು/ಪ್ರಾಥಮಿಕ ಶಿಕ್ಷಕರು ರೇಡಿಯೋ ಬಟನ್ನು ಕ್ಲಿಕ್ ಮಾಡಿದಾಗ ಈ ಕೆಳಗಿನ ಪರದೆ ಕಾಣುವುದು. ಪ್ರಶಸ್ತಿಗೆ ಆನ್-ಲೈನ್ ನ್ನಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಸಲ್ಲಿಸಿದ ಮಾಹಿತಿ ಈ ಕೆಳಗಿನಂತೆ ಕಾಣುವುದು. ಪ್ರತಿ ಶಿಕ್ಷಕರು ಸಲ್ಲಿಸಿರುವ ಮಾಹಿತಿಯನ್ನು ವಿವರಗಳನ್ನು ವೀಕ್ಷಿಸಿ ಅದರ ಮೇಲೆ ಕ್ಲಿಕ್ ಮಾಡಿದಾಗ ಶಿಕ್ಷಕರು ಸಲ್ಲಿಸಿರುವ ಎಲ್ಲಾ ಮಾಹಿತಿಯನ್ನು ವೀಕ್ಷಿಸಬಹುದು. ಸಲ್ಲಿಸಿರುವ ಮಾಹಿತಿ ಆದಾರದ ಮೇಲೆ ಪ್ರತಿ ಶಿಕ್ಷಕರ ಮೌಲ್ಯಮಾಪನಾ ಅಂಕಗಳನ್ನು ದಾಖಲಿಸುವುದು ಹಾಗೂ ಸರಾಸರಿಯನ್ನು ಲೆಕ್ಕಚಾರ ಹಾಕುವುದು. ಲೆಕ್ಕಚಾರ ಹಾಕಿದ ನಂತರ ಈ ಕೆಳಗಿನ ಸ್ಕ್ರೀನ್ನಲ್ಲಿರುವ ಕ್ರಮದ ಮೇಲೆ ಕ್ಲಿಕ್ ಮಾಡಿದಾಗ ಜಿಲ್ಲಾ ಆಯ್ಕೆ ಸಮಿತಿಯ ಮೌಲ್ಯಮಾಪನ ವರದಿಯ ಪರದೆ ಪ್ರತಿ ಶಿಕ್ಷಕರ ಅಂಕಗಳನ್ನು ನಮೂದಿಸಲು ಲಭ್ಯವಾಗುವುದು.



ಕ್ರಮದ ಮೇಲೆ ಕ್ಲಿಕ್ ಮಾಡಿದಾಗ ಜಿಲ್ಲಾ ಆಯ್ಕೆ ಸಮಿತಿಯ ಮೌಲ್ಯಮಾಪನ ವರದಿಯ ಪರದೆ ಪ್ರತಿ ಶಿಕ್ಷಕರ ಅಂಕಗಳನ್ನು ನಮೂದಿಸಲು ಈ ಕೆಳಗಿನಂತೆ ಲಭ್ಯವಾಗುವುದು. ಸರಾಸರಿ ಅಂಕಗಳನ್ನು ಮಾತ್ರ ನಮೂದು ಮಾಡಬೇಕು. ಅಂಕಗಳನ್ನು ನಮೂದು ಮಾಡಿದ ನಂತರ ಶ್ರೇಣಿ ಕಾಣಿಸುವುದು. ಅಂಕಗಳು ನಮೂದಿಸಿದ ನಂತರ ಉಳಿಸಿ ಬಟನ್ ಕ್ಲಿಕ್ ಮಾಡಬೇಕು.



Home | DDPI Marks | Action Taken | Reports

ಜಿಲ್ಲೆ ಆಯ್ಕೆ ಸಮಿತಿಯ ಅಂತಿಮ ಮೌಲ್ಯಮಾಪನ ವರದಿ

ಕೆ.ಜಿ.ಐ.ಡಿ.[redacted] ಹೆಸರು:[redacted] ಶಾಲೆಯ ಕೋಡ್[redacted]

ಭಾಗ-1 ವಸ್ತುನಿಷ್ಠ ಮಾನದಂಡಗಳು

| ಕ್ರಮ ಸಂಖ್ಯೆ | ವಿವರಣೆ | ಗರಿಷ್ಠ ಅಂಕ | ಪಡೆದ ಅಂಕ | ಶ್ರೇಣೀ |
|---|---|---|---|---|
| 1 | ಕಳೆದ 3 ವರ್ಷಗಳಲ್ಲಿ ರಾಜ್ಯ, ರಾಷ್ಟ್ರ, ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ ಸಂಶೋಧನಾ ಪ್ರಬಂಧ, ಲೇಖನ, ಪುಸ್ತಕಗಳು, ಭಾಗವಹಿಸಿದ ವಿಚಾರಗೋಷ್ಠಿಗಳು, ವಸ್ತುಪ್ರದರ್ಶನದ ವಿವರ | 10 | | |
| 2 | ಕಳೆದ 3 ವರ್ಷಗಳ ಕಾರ್ಯನಿರ್ವಹಣಾ ವರದಿ | 5 | | |
| 3 | ಯಾವುದೇ ದೂರು ಇಲ್ಲದೇ ಶಿಕ್ಷಕರು ನಿಯಮಿತವಾಗಿ ಶಾಲೆಗೆ ಹಾಜರಾಗುತ್ತಿದ್ದಾರೆಯೇ | 5 | | |
| 4 | ಕಳೆದ 3 ವರ್ಷಗಳಲ್ಲಿ ಸೇವಾನಿರತ ತರಬೇತಿ - ಹಾಜರಾತಿ, ಸಕ್ರಿಯ ಭಾಗವಹಿಸುವಿಕೆ, ಶಾಲಾ ಪ್ರಕ್ರಿಯೆಯಲ್ಲಿ ಅಳವಡಿಸುವಿಕೆ | 10 | | |
| 5 | ಕಳೆದ 3 ವರ್ಷಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಹಾಗೂ ಮಕ್ಕಳು ಶಾಲೆ ಬಿಡುವುದನ್ನು ತಡೆಗಟ್ಟಲು ಶಿಕ್ಷಕರು ಕೈಗೊಂಡ ಕ್ರಮಗಳು | 5 | | |
| 6 | ಪಡೆದಿರುವ ಹೆಚ್ಚಿನ ವಿದ್ಯಾರ್ಹತೆ ಮತ್ತು ಅದರಿಂದ ನಿಮ್ಮ ವೃತ್ತಿಜೀವನದಲ್ಲಿ ಉಂಟಾದ ಧನಾತ್ಮಕ ಪರಿಣಾಮ | 5 | | |
| 7 | ಕಳೆದ 3 ವರ್ಷಗಳಲ್ಲಿ DSERT/BOARD & NCERT ಗೆ ಇ-ಕಂಟೆಂಟ್, ಪಠ್ಯಪುಸ್ತಕ, ಶಿಕ್ಷಕರ ಕೈಪಿಡಿಗಳನ್ನು ಅಭಿವೃದ್ಧಿ ಪಡಿಸಲು ಸಕ್ರಿಯ ಭಾಗವಹಿಸುವಿಕೆ | 10 | | |



ಭಾಗ-2 ಕಾರ್ಯಕ್ಷಮತೆ ಆಧಾರಿತ ಮಾನದಂಡಗಳು

| ಕ್ರಮ ಸಂಖ್ಯೆ | ವಿವರಣೆ | ಗರಿಷ್ಠ ಅಂಕ | ಪಡೆದ ಅಂಕ | ಶ್ರೇಣೀ |
|---|---|---|---|---|
| 1 | ಕಳೆದ 3 ವರ್ಷಗಳಲ್ಲಿ ಶಿಕ್ಷಕರು ತಮ್ಮ ಬೋಧನೆಯಲ್ಲಿ ಅತಿ ಹೆಚ್ಚು ಪ್ರಭಾವಬೀರಲು ಕೈಗೊಂಡ ನಾವಿನ್ಯಯುತ ಪ್ರಯೋಗಗಳು ( ಉದಾ: ಐ.ಸಿ.ಟಿ ಬಳಕೆ, ಸಂತಸದಾಯಕ ಕಲಿಕೆಯ ತಂತ್ರಗಳು, ಪರಿಣಾಮಕಾರಿ ಬೋಧನಾ ವಿಧಾನಗಳು) ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಮತ್ತು ಪ್ರಚುರಪಡಿಸಿರುವುದು, ತಮ್ಮ ದೈನಂದಿನ ಬೋಧನಾ ಪ್ರಕ್ರಿಯೆಯಲ್ಲಿ ಸೂಕ್ತ ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಬೋಧನಾ ಕಲಿಕಾ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವುದು | 10 | 6 | ಸಿ |
| 02 A | CWSN ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಮ್ಮಿಕೊಂಡಿರುವ ವಿಶೇಷ ಚಟುವಟಿಕೆಗಳು | 10 | 7 | ಬಿ |
| 02 B | ಶಿಕ್ಷಕರ ಮಾರ್ಗದರ್ಶನದಲ್ಲಿ ವಿವಿಧ ಹಂತದಲ್ಲಿ ಮಕ್ಕಳಿಗಾಗಿ (ರಾಜ್ಯ/ವಿಭಾಗ/ಜಿಲ್ಲೆ/ತಾಲ್ಲೂಕು) ಆಯೋಜಿಸಿದ ವಿಶೇಷ ಹಾಗೂ ಸಹಪಠ್ಯ ಚಟುವಟಿಕೆಗಳ ವಿವರ ಮತ್ತು ಅದರ ಧನಾತ್ಮಕ ಪರಿಣಾಮ | 10 | 8 | ಬಿ |
| 03 A1 | ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ, ವೃತ್ತಿ ಮಾರ್ಗದರ್ಶನ, ವ್ಯಕ್ತಿತ್ವ ನಿರ್ಮಾಣದಲ್ಲಿ ಸಮುದಾಯದ ಸಹಭಾಗಿತ್ವ ( ಶಿಕ್ಷಕರಿಂದ ಪ್ರೇರೇಪಿತ) | 5 | 4 | ಬಿ |
| 03 A2 | ಶಾಲಾ ಭೌತಿಕ ಸೌಲಭ್ಯಗಳನ್ನು ಉತ್ತಮ ಪಡಿಸಲು ಸಮುದಾಯವನ್ನು ತೊಡಗಿಸಿಕೊಂಡಿರುವುದು (ಶಿಕ್ಷಕರಿಂದ ಪ್ರೇರೇಪಿತ) | 10 | 7 | ಬಿ |
| 03 B | ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಪ್ರೇರೇಪಿಸಲು ಕೈಗೊಂಡ ವಿಶಿಷ್ಟ ಕ್ರಮಗಳು | 5 | 5 | ಎ |

ಉಳಿಸಿ

ಉಳಿಸಿ ಬಟನ್ ಕ್ಲಿಕ್ ಮಾಡಿದ ನಂತರ ನಮೂದು ಮಾಡಿರುವ ಎಲ್ಲಾ ಶಿಕ್ಷಕರ ಕ್ರೋಢೀಕೃತ ಅಂಕಗಳು ಈ ಕೆಳಗಿನ ಪರದೆಯಲ್ಲಿರುವಂತೆ ಕಾಣುವುದು. Export to Excel ನ್ನು ಕ್ಲಿಕ್ ಮಾಡಿ ನಮೂದು ಮಾಡಿರುವ ಎಲ್ಲಾ ಶಿಕ್ಷಕರ ಕ್ರೋಢೀಕೃತ ಅಂಕಗಳು ವಿವರವನ್ನು SAVE ಮಾಡಬಹುದು.

ಪೂರ್ಣವಾಗಿ ಎಲ್ಲಾ ಶಿಕ್ಷಕರ ಕ್ರೋಢೀಕೃತ ಅಂಕಗಳನ್ನು ನಮೂದು ಮಾಡಿದ ನಂತರ ASSESSMENT tab ಅನ್ನು ಒತ್ತಿ ಪ್ರೌಢ ಶಿಕ್ಷಕರು ಮತ್ತು ಪ್ರಾಥಮಿಕ ಶಿಕ್ಷಕರಿಗೆ ಸಂಬಂಧಿಸಿದ ಜಿಲ್ಲಾ ಆಯ್ಕೆ ಸಮಿತಿಯ ಅಂತಿಮ ಮೌಲ್ಯಮಾಪನ ವರದಿಯ ನಡವಳಿಯನ್ನು Choose File ಕ್ಲಿಕ್ ಮಾಡಿ ಪ್ರತ್ಯೇಕವಾಗಿ upload ಮಾಡುವುದು. ನಂತರ **"CPIಗೆ ಕಳುಹಿಸಿ"** ಬಟನ್ ಕ್ಲಿಕ್ ಮಾಡಿ ಗ ಮುಂದಿನ ಹಂತಕ್ಕೆ ಪ್ರಶಸ್ತಿ ಅರ್ಜಿಗಳು ಆನ್-ಲೈನ್ ನ್ನಲ್ಲಿ ರವಾನೆ ಆಗುವುದು




ಈ ಬಗ್ಗೆ ಯಾವುದೇ ಸ್ಪಷ್ಟೀಕರಣ ಅಗತ್ಯವಿದ್ದಲ್ಲಿ ಇ-ಮೇಲ್ ವಿಳಾಸ teacheraward2021@gmail.com ಗೆ ಮೇಲ್ ಮಾಡಿ ಮಾಹಿತಿ ಪಡೆಯುವುದು.